KACM210039162021

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಕಡೂರು

## ಸಿಸಿ . ನಂ. 2627/2021

ಫಿರ್ಯಾದಿ : ಕಡೂರು ಪೊಲೀಸ್ ಠಾಣೆ

ವಿರುದ್ದ

ಆರೋಪಿತರು : ಜಿ. ಎಲ್. ತಿಮ್ಮಪ್ಪ ಬಿನ್ ಲಕ್ಷ್ಮಯ್ಯ,
ವಯಸ್ಸು ಸುಮಾರು 60 ವರ್ಷ,
ಕೆಎ 18-ಯು-4268 ನೇ ಮೋಟಾರ್ ಸೈಕಲ್, ಚಾಲಕ,
ವಾಸಃ ಗೋವಿಂದಪುರ, ಚಿಕ್ಕಂಗಳ ಅಂಚೆ, ಕಡೂರು ತಾಲ್ಲೂಕು.

## ಆರೋಪಣೆ

ಶ್ರೀ. ಹೆಚ್.ಪಿ ಮೋಹನ್‌ಕುಮಾರ್, ಬಿ.ಎಸ್ಸಿ , ಎಲ್ ಎಲ್ ಬಿ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ಕಡೂರು ಆದ ನಾನು ಈ ಮೂಲಕ ಕೆಳಕಂಡಂತೆ ಆಪಾದಿತರಾದ ನಿಮ್ಮ ಮೇಲೆ ಹೊರೆಸುವ ಆರೋಪಣೆ.

ದಿನಾಂಕಃ 05.03.2021 ರಂದು ರಾತ್ರಿ 7.00 ಗಂಟೆ ಸಮಯದಲ್ಲಿ ಕಡೂರು ಠಾಣಾ ಸರಹದ್ದಿನ ಕಡೂರು ಎಮ್ಮೆದೊಡ್ಡಿ ರಸ್ತೆಯ ಅಂದೇನಹಳ್ಳಿ ಗ್ರಾಮದ ಸಮೀಪ ಇರುವ ರಂಗೋಲಿ ಸರಲು ಬಳಿ ಚಾಸಾ.1 ರವರ ಗಂಡನಾದ ಚಿತ್ರಶೇಖರಪ್ಪ ಇವರು ಕಡೂರು ಕಡೆಯಿಂದ ಕನ್ನೇಹಳ್ಳಿ ಗ್ರಾಮಕ್ಕೆ ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿರುವಾಗ ಅರೋಪಿತರಾದ ನೀವು ಹಿಂದಿನಿಂದ ಮೋಟಾರ್ ಸೈಕ್ಲ್ ನಂ.ಕೆಎ 18-ಯು-4268 ನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಚಿತ್ರಶೇಖರಪ್ಪರವರಿಗೆ ಢಿಕ್ಕಿ ಹೊಡೆಸಿ ಅಪಘಾತಪಡಿಸಿದ ಪರಿಣಾಮ ಚಿತ್ರಶೇಖರಪ್ಪರವರು ರಸ್ತೆಯ ಮೇಲೆ ಬಿದ್ದು, ಅವರಿಗೆ ತಲೆಗೆ, ಮುಖಕ್ಕೆ ಪೆಟ್ಟಾಗಿ ತೀವ್ರ ಸ್ವರೂಪದ ಗಾಯವಾಗಿದ್ದು, ಆರೋಪಿತರಾದ ನಿಮಗೂ ಸಹ ಸೊಂಟಕ್ಕೆ, ಎಡಭುಜಕ್ಕೆ ಒಳಪೆಟ್ಟಾಗಿ ಸಾಮಾನ್ಯ ಸ್ವರೂಪದ ಗಾಯವಾಗಿದ್ದು, ಅವರನ್ನು ಕಡೂರು ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಿಸಿದ್ದು, ಚಿತ್ರಶೇಖರಪ್ಪರವರನ್ನು ವೈದ್ಯರ ಸಲಹೆಯ ಮೇರೆಗೆ ದಿನಾಂಕ 08.03.2021 ರಂದು ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗಕ್ಕೆ ಕರೆದುಕೊಂಡು ಹೋಗುತ್ತಿರುವಾಗ ಮಾರ್ಗಮಧ್ಯ ಮೃತಪಟ್ಟಿರುತ್ತಾರೆ. ಸದರಿಯವರ ಸಾವಿಗೆ ನೀವು ನಿಮ್ಮ ವಾಹನವನ್ನು ಅತಿವೇಗ ಅಥವಾ ಅಜಾಗರುಕತೆಯಿಂದ ಚಾಲನೆ ಮಾಡಿರುವುದೇ ಕಾರಣವಾಗಿರುತ್ತದೆ. ಆದ ಕಾರಣ ಭಾರತೀಯ ದಂಡ ಸಂಹಿತೆ ಕಲಂ 279, 337, 304(ಎ)ರ ಅಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೇಯ ಒಳಗೆ ಮಾಡಿರುವಿರಿ.

ಪ್ರಶ್ನೆಃ 1- ನಿಮ್ಮ ಮೇಲಿನ ಆಪಾದನೆಯ ಸಾರವನ್ನು ಓದಿ ವಿವರಿಸಿ ಹೇಳಿದಾಗ ನಿಮಗೆ ಅರ್ಥವಾಯಿತೇ ?
ಉತ್ತರಃ

ಪ್ರಶ್ನೆಃ 2- ನೀವು ನಿಮ್ಮ ತಪ್ಪನ್ನು ಒಪ್ಪಿಕೊಳ್ಳುವಿರೋ ಅಥವಾ ನಿಮ್ಮ ಪರ ಪ್ರತಿರಕ್ಷಣೆ ಇದೆಯೇ?
ಉತ್ತರಃ

ಆದ್ದರಿಂದ ನೀವು ಮೇಲ್ಕಂಡ ದಂಡನೀಯ ಅಪರಾಧಗಳ ಮೇಲೆ ಈ ನ್ಯಾಯಾಲಯದಿಂದ ವಿಚಾರಣೆಗೆ ಒಳಪಡತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

**KACM210039162021**

ದಿ. 07.06.2022.

Sd/-

(ಹೆಚ್.ಪಿ ಮೋಹನ್ ಕುಮಾರ್)

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,

ಕಡೂರು.

Visit **ecourts.gov.in** for updates or download mobile app "**eCourts Services**" from Android or iOS